ಎರಡನೇ **ಅಪರ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ. ಕನಕಪುರ.**

CC No.790/2021

CW -8 PW - 6

| | | |
|---|---|---|
| ಹೆಸರು | ಃ | ಬಲರಾಮ್ |
| ತಂದೆಯ ಹೆಸರು | ಃ | ರಾಜಣ್ಣ |
| ವಯಸ್ಸು | ಃ | 41 ವರ್ಷ |
| ಉದ್ಯೋಗ | ಃ | HC |
| ವಾಸ | ಃ | ಸಾತನೂರು |

ಸಾಕ್ಷಿಯನ್ನು ಕರೆಸಲಾಯಿತು. ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ ಃ ಮಾನ್ಯ ಎಪಿಪಿ ಯವರಿಂದ ಃ ದಿನಾಂಕ 06.08.2024

ನಾನು 02.06.2019 ರಿಂದ 06.01.2023 ರವರೆಗೆ ಮುಖ್ಯ ಪೇದೆಯಾಗಿ ಕನಕಪುರ ಗ್ರಾಮಾಂತರ ಠಾಣೆಯಲ್ಲಿ ಕೆಲಸ ನಿರ್ವಹಿಸುತ್ತಿರುತ್ತೇನೆ .

ದಿಃ09.06.2021 ರಂದು ನಾನು SHO ಠಾಣಾ ಪ್ರಭಾರದಲ್ಲಿದ್ದಾಗ ಚಾಸಾ-1 ರವರು ಆನುಮಾನಹಳ್ಳಿ ಲಿಂಗರಾಜು ಬಿನ್ ಸಿದ್ದಲಿಂಗಯ್ಯ ರವರು ಸರ್ಕಾರದ ಕೋವಿಡ್ ಆದೇಶವನ್ನು ಉಲ್ಲಂಘಿ ಸಿ ಅಕ್ರಮವಾಗಿ ಮದ್ಯ ಮಾರಾಟ ಮಾಡುತ್ತಿರುವ ಬಗ್ಗೆ ಮಾಹಿತಿ ಬಂದಿದ್ದು, ಸ್ಥಳಕ್ಕೆ ಹೋಗಿ ಪಂಚನಾಮೆ ಮಾಡಿ ತಂದು ನೀಡಿದ ವರದಿಯನ್ನು ಅದೇ ದಿನ ಮಧ್ಯಾಹ್ನ 1.45 ಗಂಟೆ ಸಮಯದಲ್ಲಿ ಠಾಣಾ ಮೊಕದಮೆ ಸಂಖ್ಯೆ 129/2021 ಕಲಂ. 32,34 ಕೆ ಇ ಆಕ್ಟ್ ರೀತ್ಯಾ ಪ್ರಕರಣ ದಾಖಲಿಸಿರುತ್ತೇನೆ. ಅದೇ ದಿನ ಠಾಣಾ ಪಿ. ಎಫ್ ನಂ. 111/2021 ರಲ್ಲಿ ಆ ಪ್ರಕರಣಕ್ಕೆ ಸಂಬಂಧಪಟ್ಟಂತೆ ನೀಡಿದ ಮಾಲುಗಳನ್ನು ಸ್ವತ್ತು ಪಟ್ಟಿಯಲ್ಲಿ ನಮೂದಿಸಿರುತ್ತೇವೆ. FIR ಹಾಗೂ PF ಹಾಕಿರುತ್ತೇನೆ.

ಚಾಸಾ-1 ರವರು ನೀಡಿರುವ ವರದಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-4 ಎಂದು ಗುರುತಿಸಲಾಯಿತು. ಸಹಿಯನ್ನು ನಿಪಿ-4 ಎ ಎಂದು ಗುರುತಿಸಲಾಯಿತು. FIR ಅನ್ನು ನಿಪಿ-5 ಎಂದು , ಸಹಿಯನ್ನು ನಿಪಿ-5 ಎ ಎಂದು ಗುರುತಿಸಲಾಯಿತು.

<u>ಪಾಟೀಸವಾಲುಃ ಆರೋಪಿತರ ಪರ ಶ್ರೀ ವಕೀಲರಿಂದಃ</u>

ನಾನು ಬೆಳಿಗ್ಗೆ 8.00 ರಿಂದ ಸಂಜೆ 8.00 ಠಾಣಾ SHO ಆಗಿ ಕಾರ್ಯ ನಿರ್ವಹಿಸುತ್ತಿದ್ದೆ. ಆದಿನ ಆನುಮಾನಹಳ್ಳಿಗೆ ಸಂಬಂಧಿಸಿದಂತೆ ಒಂದು ಪ್ರಕರಣ ದಾಖಲಿಸಿರಬಹುದು. ಚಾಸಾ-1 ರವರು ಆ ದಿನ ನನಗೆ ಒಂದೇ ವರದಿಯನ್ನು ನೀಡಿದ್ದರು. ಮು.ಮಾ. ಗಳ ಸೀಲ್ ಮತ್ತು ಸಹಿಯನ್ನು ಠಾಣೆಯಲ್ಲಿ ಹಾಕಿರುತ್ತಾರೆ. ನಾನು ಮು.ಮಾ. ಗಳ ಮೇಲೆ ಯಾರ ಸಹಿಯನ್ನು ಪಡೆದಿರುವುದಿಲ್ಲ. ಯಾವುದೇ ತನಿಖಾ ವರದಿ ಮತ್ತು ಮಹಜರ್ ನೀಡಿಲ್ಲ, ಈ ಪ್ರಕರಣಕ್ಕಾಗಿ ಸೃಷ್ಟಿಸಿಕೊಂಡು ಹಾಜರುಪಡಿಸಿದ್ದೇನೆ ಎಂದರೆ ಸರಿಯಲ್ಲ. ಮೂ.ಮಾ. 1 ರಿಂದ 3 ಹಾಗೂ ಪಿ ಎಫ್ ಅನ್ನು ಈ ಪ್ರಕರಣಕ್ಕಾಗಿ ಸೃಷ್ಟಿಸಿದ್ದೇವೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಏನೂ ಇರುವುದಿಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನವನ್ನು ಗಣಕೀಕರಣ ಮಾಡಲಾಯಿತು)

ಓ ಹೇ ಕೇ ಸ ಒ

ಎರಡನೇ ಅಪರ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ, ಕನಕಪುರ